KARNATAKA STATE POLICE

**ಕರ್ನಾಟಕ ಸರ್ಕಾರ**
**ಪೊಲೀಸ್ ಇಲಾಖೆ**

ಸಂಖ್ಯೆ:86/ನೇಮಕಾತಿ-2/2019-20

ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್,
ನೇಮಕಾತಿ ರವರ ಕಛೇರಿ
ಕಾರ್ಲಟನ್ ಭವನ, ಅರಮನೆ ರಸ್ತೆ,
ಬೆಂಗಳೂರು, ದಿನಾಂಕ:18.03.2021.

ವಿಷಯ: ವಿಶೇಷ ರಿಸರ್ವ್ ಸಬ್-ಇನ್ಸ್‌ಪೆಕ್ಟರ್ (ಕೆಎಸ್‌ಆರ್‌ಪಿ) (ಪುರುಷ) ಹಾಗೂ ಸೇವಾನಿರತ ಹುದ್ದೆಗಳ ನೇಮಕಾತಿ ಕುರಿತು.

ಉಲ್ಲೇಖ: 1] ಅಧಿಸೂಚನೆ ಸಂಖ್ಯೆ:86/ನೇಮಕಾತಿ-2/2019-20, ದಿನಾಂಕ:29.08.2019.
2] ತಾತ್ಕಾಲಿಕ ಆಯ್ಕೆ ಪಟ್ಟಿಗಳ ಪ್ರಕಟಣೆ ದಿನಾಂಕ: 28.10.2020 ಮತ್ತು 30.11.2020.
3] ಶ್ರೀ ಮಹೇಶ್ ಎಸ್ ಚೌದರಿ ಮತ್ತು ಶ್ರೀ ಅಬ್ದುಲ್ ಸಲೀಂ ರವರುಗಳ ಮುಚ್ಚಳಿಕ ಪ್ರಮಾಣ ಪತ್ರಗಳ ದಿನಾಂಕ:09.03.2021 & 10.03.2021.

## ತಾತ್ಕಾಲಿಕ ಆಯ್ಕೆ ಪಟ್ಟಿ

ವಿಶೇಷ ರಿಸರ್ವ್ ಸಬ್-ಇನ್ಸ್‌ಪೆಕ್ಟರ್ (ಕೆಎಸ್‌ಆರ್‌ಪಿ) (ಪುರುಷ) ಹಾಗೂ ಸೇವಾನಿರತ 40 ಹುದ್ದೆಗಳ ನೇಮಕಾತಿಯನ್ನು ಉಲ್ಲೇಖಿತ-1ರ ಅಧಿಸೂಚನೆಯನ್ವಯ ಕೈಗೊಳ್ಳಲಾಗಿರುತ್ತದೆ. ವೃಂದ ಮತ್ತು ನೇಮಕಾತಿ ನಿಯಮಗಳು, 2009 ರಲ್ಲಿನ ನಿಯಮಗಳನ್ವಯ ಮೇಲ್ಕಂಡ ಪ್ರಕ್ರಿಯೆಗಳು ಪೂರ್ಣಗೊಂಡ ನಂತರ ಮೆರಿಟ್ ಹಾಗೂ ಮೀಸಲಾತಿಯನುಸಾರ ಅರ್ಹ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಗಳನ್ನು ಉಲ್ಲೇಖಿತ-2 ರನ್ವಯ ಪ್ರಕಟಿಸಲಾಗಿರುತ್ತದೆ.

2. 02 ಅಭ್ಯರ್ಥಿಗಳಾದ ಶ್ರೀ ಮಹೇಶ್ ಎಸ್ ಚೌದರಿ ಮತ್ತು ಶ್ರೀ ಅಬ್ದುಲ್ ಸಲೀಂ, ರವರುಗಳು ಕರ್ನಾಟಕ ಲೋಕ ಸೇವಾ ಆಯೋಗದಿಂದ ಪ್ರಕಟಿಸಲಾಗಿರುವ ಅಬಕಾರಿ ಉಪ ನಿರೀಕ್ಷಕರ ಹುದ್ದೆಗೆ ಮತ್ತು ವಿಶೇಷ ಆರ್‌ಎಸ್‌ಐ (ಕೆಎಸ್‌ಆರ್‌ಪಿ) ಹುದ್ದೆಗಳೆರಡಕ್ಕೂ ಆಯ್ಕೆಯಾದ ಕಾರಣ ಸದರಿಯವರು ಉಲ್ಲೇಖಿತ-3ರ ಮುಚ್ಚಳಿಕೆ ಪ್ರಮಾಣ ಪತ್ರಗಳನ್ನು ಸಲ್ಲಿಸಿ, ವಿಶೇಷ ಆರ್‌ಎಸ್‌ಐ (ಕೆಎಸ್‌ಆರ್‌ಪಿ) ಹುದ್ದೆಗೆ ಸೇರಲು ಇಚ್ಛೆಯಿರುವುದಿಲ್ಲವೆಂದು ತಿಳಿಸಿದ ಮೇರೆಗೆ ಸದರಿಯವರುಗಳ ಅಭ್ಯರ್ಥಿತನವನ್ನು ಆದೇಶ ಸಂಖ್ಯೆ:86/ನೇಮಕಾತಿ-2/2019-20, ದಿ:18.03.2021 ರನ್ವಯ ರದ್ದುಗೊಳಿಸಲಾಗಿರುತ್ತದೆ.

3. ಮೇಲ್ಕಂಡ 02 ಅಭ್ಯರ್ಥಿಗಳ ಅಭ್ಯರ್ಥಿತನವನ್ನು ರದ್ದುಗೊಳಿಸಿದ ಕಾರಣದಿಂದ ಉಂಟಾದ ರಿಕ್ತ ಸ್ಥಾನಗಳಿಗೆ ಮೆರಿಟ್ ಹಾಗೂ ಮೀಸಲಾತಿಯನುಸಾರ ಅರ್ಹರಿರುವ 02 ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಕೆಳಗಿನಂತೆ ಪ್ರಕಟಿಸಲಾಗಿರುತ್ತದೆ.

ಎ) ಈ ಆಯ್ಕೆ ಪಟ್ಟಿಯು ನಿಯಮಗಳನುಸಾರ ರಚಿಸಲಾಗಿರುವ ವೈದ್ಯಕೀಯ ಮಂಡಳಿಯು ನಡೆಸುವ ವೈದ್ಯಕೀಯ ಪರೀಕ್ಷೆಯ ಫಲಿತಾಂಶಗಳಿಗೆ ಒಳಪಟ್ಟಿರುತ್ತದೆ.

ಬಿ) ಆಯ್ಕೆ ಪಟ್ಟಿಯಲ್ಲಿ ಅಭ್ಯರ್ಥಿಯ ಹೆಸರು ಇದ್ದ ಕಾರಣದಿಂದ ಸದರಿಯವರಿಗೆ ಹುದ್ದೆಯ ನೇಮಕಾತಿಗೆ ಸಂಬಂಧಿಸಿದಂತೆ, ಯಾವುದೇ ರೀತಿಯ ಕಾನೂನಾತ್ಮಕ ಹಕ್ಕು ಇರುವುದಿಲ್ಲ. ಸದರಿ ನೇಮಕಾತಿಯು ಮೇಲ್ಕಂಡಂತೆ ಹೇಳಲಾದ ಷರತ್ತುಗಳಿಗೆ ಒಳಪಟ್ಟಿರುತ್ತದೆ.

ಸಿ) ಈ ಆಯ್ಕೆ ಪಟ್ಟಿಯು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿ / ಮಾನ್ಯ ಉಚ್ಚ ನ್ಯಾಯಾಲಯ / ಮಾನ್ಯ ಭಾರತದ ಸರ್ವೋಚ್ಛ ನ್ಯಾಯಾಲಯದ ಅಂತಿಮ ತೀರ್ಮಾನಗಳಿಗೆ ಒಳಪಟ್ಟಿರುತ್ತದೆ.

| PROVISIONAL SELECT LIST FOR THE POST OF SPL. RESERVE SUB-INSPECTOR (KSRP) (MEN) (MERITWISE) | | | | | | | |
|---|---|---|---|---|---|---|---|
| SL. NO. | APPN. NO. | ROLL NO. | NAME | MARKS SECURED | | TOTAL | SELECTED CATEGORY |
| | | | | P1 | P2 | | |
| 1 | 1765108 | 3606112 | SATISH S G | 29 | 133.5 | 162.5 | 3A_RUR |
| 2 | 1751171 | 3602507 | BASAVANT BURANI | 29.5 | 111 | 140.5 | GM_EXS |

ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್,
ನೇಮಕಾತಿ ಮತ್ತು ಅಧ್ಯಕ್ಷರು,
ವಿಶೇಷ.ಆರ್‌ಎಸ್ಐ (ಕೆಎಸ್‌ಆರ್‌ಪಿ) ನೇಮಕಾತಿ ಸಮಿತಿ,
ಕಾರ್ಲಟನ್ ಭವನ, ಅರಮನೆ ರಸ್ತೆ,
ಬೆಂಗಳೂರು.

**ಪ್ರತಿಯನ್ನು:** ಕಛೇರಿ ಕಡತ ಮತ್ತು ಸೂಚನಾ ಫಲಕ.

**ಪ್ರತಿಯನ್ನು ಅಭಿನಂದನೆಗಳೊಂದಿಗೆ:**
ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಕರ್ನಾಟಕ ರಾಜ್ಯ, ಬೆಂಗಳೂರು.